ನಿಯಮ-72ರ
ಕ್ರಮಸಂಖ್ಯೆ-107

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಒ 43 ಸಿಹೆಚ್‌ಎಸ್ 2021 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ: 11.11.2021

**ಇಂದ,**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ,
ಬೆಂಗಳೂರು-1.

**ಇವರಿಗೆ:**
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು,
ವಿಧಾನ ಸೌಧ
ಬೆಂಗಳೂರು

ಮಾನ್ಯರೆ,

**ವಿಷಯ:** ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ ಇವರ ನಿಯಮ-72 ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರಿಸುವ ಬಗ್ಗೆ.

**ಉಲ್ಲೇಖ:** 1) ತಮ್ಮ ಪತ್ರ ದಿನಾಂಕ: 28.10.2021
2) ಇದೇ ಸಮ ಸಂಖ್ಯೆ ಪತ್ರ ದಿನಾಂಕ:22.09.2021.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ತಮ್ಮ ಪತ್ರದಲ್ಲಿ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿ ಇವರ ನಿಯಮ-72ರಡಿಯಲ್ಲಿ ನೀಡಿರುವ ಸೂಚನೆಗೆ ಇಲಾಖೆಯಿಂದ ಉತ್ತರ ಬಂದಿರುವುದಿಲ್ಲವೆಂದು ತಿಳಿಸಿರುತ್ತೀರಿ.

ಆದರೆ ಉಲ್ಲೇಖ (2)ರ ಪತ್ರದ ಮುಖೇನ ಸದರಿ ಸೂಚನೆಗೆ ಇಲಾಖೆಯಿಂದ ಉತ್ತರದ 50 ಪ್ರತಿಗಳನ್ನು ನೀಡಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ). ಆದಾಗ್ಯೂ ಉತ್ತರದ 05 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಮತ್ತೊಮ್ಮೆ ಕಳುಹಿಸಿದೆ.

ತಮ್ಮ ನಂಬುಗೆಯ

(ಸಹಿ) 11/11

**(ರಾಮದಾಸ್ ವಿ.)**
ಸರ್ಕಾರದ ಅಧೀನ ಕಾರ್ಯದರ್ಶಿ-3
ಸಹಕಾರ ಇಲಾಖೆ.

## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 334 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 03-02-2021. (ಕಂದಾಯ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ) |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1. | ಭೂ-ಪರಿವರ್ತನೆಯಾದ ಜಾಗವನ್ನು ನಮೂನೆ-11 ಬಿ ಮೂಲಕ ಖರೀದಿಸಿದ್ದರೂ ನಮೂನೆ-9 ಹಾಗೂ 11-ಎ ನೀಡುವುದನ್ನು ರಾಜ್ಯದಲ್ಲಿ ಸ್ಥಗಿತಗೊಳಿಸಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 ಮತ್ತು 11ಎ ಯನ್ನು ಪಡೆಯಲು ಆಸ್ತಿಯ ಮಾಲೀಕರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-9 ಮತ್ತು 11ಎ ವಿತರಿಸುತ್ತಾರೆ.<br><br>ಕ್ರಮಬದ್ಧವಲ್ಲದ ಆಸ್ತಿಗಳಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ |
| 2. | ಬಂದಿದ್ದಲ್ಲಿ, ನಿಯಮಾವಳಿಯಂತೆ ಸ್ಟ್ಯಾಂಪ್ ಶುಲ್ಕ ಇತ್ಯಾದಿಗಳನ್ನು ಭೂ-ಪರಿವರ್ತಿತ ಜಾಗವನ್ನು 11-ಬಿ ಮೂಲಕ ಖರೀದಿಸಿದವರಿಗೆ ನಮೂನೆ-9 ಹಾಗೂ 11-ಎ ನೀಡಲು ಯಾವ ಕ್ರಮ ವಹಿಸಲಾಗಿದೆ. | ನಮೂನೆ 11ಬಿ ಯನ್ನು ಪಡೆಯಲು ಆಸ್ತಿಯ ಮಾಲೀಕರು ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ 11ಬಿ ವಿತರಿಸುತ್ತಾರೆ.<br><br>ಕ್ರಮಬದ್ಧವಲ್ಲದ ಆಸ್ತಿಗಳಿಗೆ ಸಂಬಂಧಿಸಿದಂತೆ ನಮೂನೆ-11ಬಿ |
| 3. | ಇಲ್ಲವಾದಲ್ಲಿ ನಮೂನೆ-9 ಹಾಗೂ 11-ಎ ನ್ನು ನೀಡಲು ಯಾವಾಗ ಕ್ರಮ ವಹಿಸಲಾಗುವುದು? | ಪಡೆದಿರುವ ಆಸ್ತಿಯ ಮಾಲೀಕರು ನಮೂನೆ-9 ಮತ್ತು 11ಎ ಯನ್ನು ಪಡೆಯಲು ಆಸ್ತಿಗೆ ಸಂಬಂಧಿಸಿದ ಭೂ ಪರಿವರ್ತನೆ ಆದೇಶ ಮತ್ತು ಸಕ್ಷಮ ಪ್ರಾಧಿಕಾರದಿಂದ ಅಂದರೆ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ನಗರಾಭಿವೃದ್ಧಿ ಪ್ರಾಧಿಕಾರ / ಯೋಜನಾ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆದ ವಿನ್ಯಾಸ ನಕ್ಷೆ (ಲೇಔಟ್ ಪ್ಲಾನ್) ಒದಗಿಸಿದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ನಮೂನೆ-9 ಮತ್ತು 11ಎ ವಿತರಿಸುತ್ತಾರೆ. |

ಸಂ. ಗ್ರಾಅಪ 65 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ನಿಯಮ-72ರ
ಕ್ರ.ಸಂ.ಖ್ಯೆ-107

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:-**

ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆಯ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ, ಇವರು ಕಳೆದ 50 ವರ್ಷಗಳಲ್ಲಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಸುಮಾರು 12 ಸಾವಿರ ಬಿ.ಇ.ಎಂ.ಎಲ್ ಕಾರ್ಮಿಕರಿಗೆ ನಿವೇಶನವನ್ನು ಹಂಚಿಕೆ ಮಾಡಿದೆ. ಆದರೆ 2002-2003 ನೇ ಸಾಲಿನಲ್ಲಿ ಸಂಘದ ಸದಸ್ಯರಿಗೆ ನಿವೇಶನವನ್ನು ಹಂಚಿಕೆ ಮಾಡಲು ಉದ್ದೇಶಿಸಿ ಕೆ.ಆರ್.ಪುರಂನ ಥಣಿಸಂದ್ರ, ಗೆದ್ದಹಳ್ಳಿ ಹಾಗೂ ಬೈರತಿ ಅಮಾನಿ ಖಾನೆ ಪ್ರದೇಶಗಳಲ್ಲಿ ಒಟ್ಟು 78 ಎಕರೆ ಪ್ರದೇಶವನ್ನು ರೈತರಿಂದ ನೇರವಾಗಿ ಖರೀದಿ ಮಾಡಿ ಅಂದಿನ ಸಂಘದ ನಿರ್ದೇಶಕರ/ಪದಾಧಿಕಾರಿಗಳ ಹೆಸರಿಗೆ ನೊಂದಣಿಯನ್ನು ಮಾಡಿಸಲಾಗಿದ್ದ ಈ ಜಮೀನನ್ನು ಸಂಘದ ಪದಾಧಿಕಾರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಶಾಮೀಲಾಗಿ ನೈಜ ಸಂಘದ ಸದಸ್ಯರಿಗೆ ನಿವೇಶನವನ್ನು ನೀಡದೆ ಖಾಸಗಿ ವ್ಯಕ್ತಿಗಳಿಗೆ ಮಾರಾಟವನ್ನು ಮಾಡಿ, ಸುಮಾರು 45 ರಿಂದ 50 ಕೋಟಿ ರೂಗಳಷ್ಟು ಹಣವನ್ನು ಸಂಘದ ಮಾಜಿ ಪದಾಧಿಕಾರಿಗಳು ಗುಳುಂ ಮಾಡಿದ್ದಾರೆ. ಸುಮಾರು 20 ವರ್ಷಗಳಿಂದ ನಿವೇಶನಕ್ಕಾಗಿ ಕಾಯುತ್ತಿದ್ದ ಸಂಘದ ನೈಜ ಸದಸ್ಯರಿಗೆ ವಂಚನೆಯನ್ನು ಮಾಡಿರುವ ಈ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ಸದನದಲ್ಲಿ ಪ್ರಸ್ತಾಪಿಸಲು ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:-**

- ದಿನಾಂಕ:31-03-2021 ರ ಅಂತ್ಯಕ್ಕೆ ಸಂಘದಲ್ಲಿ 3726 ಸದಸ್ಯರು, 2729 ಸಹಸದಸ್ಯರಿರುತ್ತಾರೆ. ಸಂಘವು ಇದುವರೆಗೆ 11 ಬಡಾವಣೆಗಳನ್ನು ನಿರ್ಮಿಸಿ ತನ್ನ ಸದಸ್ಯರಿಗೆ 7356 ನಿವೇಶನಗಳನ್ನು ನೋಂದಣಿ ಮಾಡಿರುತ್ತದೆ.
- ಕೆ.ಆರ್.ಪುರಂ ಹೋಬಳಿಯ ಥಣಿಸಂದ್ರ, ಗೆದ್ದಹಳ್ಳಿ ಭೈರತಿ ಅಮಾನಿಖಾನೆ ಗ್ರಾಮಗಳಲ್ಲಿ 94 ಎಕರೆ ಜಮೀನನ್ನು ಸದಸ್ಯರಿಗೆ ನಿವೇಶನವನ್ನು ಅಭಿವೃದ್ಧಿಪಡಿಸುವ ಸಲುವಾಗಿ 2002 ನೇ ಸಾಲಿನಲ್ಲಿ ನಿರ್ದೇಶಕರ ಹೆಸರಿನಲ್ಲಿ ನೋಂದಣಿರಹಿತ ಕರಾರು ಮಾಡಿಕೊಂಡಿರುತ್ತಾರೆ.
- ಸದರಿ ಜಮೀನನ್ನು ಒಳಗೊಂಡಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿ:03-02-2003 ರಲ್ಲಿ 4(1) ನೋಟೀಫಿಕೇಶನ್ ಮಾಡಿ ದಿ:23-02-2004 ರಲ್ಲಿ 6(1) ರೀತ್ಯಾ ಸ್ವಾಧೀನಪಡಿಸಿಕೊಂಡಿರುತ್ತಾರೆ.
- ಒಟ್ಟು 78 ಎಕರೆ ಜಮೀನು 2003-04 ನೇ ಸಾಲಿನಲ್ಲಿ ಸಂಘದ ಅಂದಿನ ಆಡಳಿತ ಮಂಡಳಿ ನಿರ್ದೇಶಕರುಗಳಾದ ಶ್ರೀ ದೊಡ್ಡಸ್ವಾಮಿಗೌಡ ಇವರ ಹೆಸರಿನಲ್ಲಿ 4 ಎಕರೆ 10 ಗುಂಟೆ, ಶ್ರೀ ಎಂ.ಹುಚ್ಚೇಗೌಡ ಇವರ ಹೆಸರಿನಲ್ಲಿ 5 ಎಕರೆ, ಶ್ರೀ ಹೆಚ್.ಎಂ.ಕುಮಾರ್ ಇವರ ಹೆಸರಿನಲ್ಲಿ 27 ಎಕರೆ, ಶ್ರೀ ಜೆ.ಮುನ್ನಾಗಪ್ಪ ಇವರ ಹೆಸರಿನಲ್ಲಿ 41 ಎಕರೆ ನೋಂದಣಿಯಾಗಿರುತ್ತವೆ.
- ಸದರಿ ಜಮೀನುಗಳ ಖರೀದಿಗಾಗಿ ಸಂಘದ ಸದಸ್ಯರಿಂದ ಸಂಗ್ರಹಿಸಿದ ಸುಮಾರು 22 ಕೋಟಿ ನಿವೇಶನ ಮುಂಗಡದ ಹಣ ನೀಡಿದೆ.

..2

- 4(1) ನೋಟಿಫಿಕೇಶನ್ ಆಗಿದ್ದಾಗ್ಯೂ ಸಹ ಸಂಘದ ಸದಸ್ಯರಿಂದ ಸಂಗ್ರಹಿಸಲಾಗಿದ್ದ ನಿವೇಶನ ಠೇವಣಿಯನ್ನು ಸದರಿ ಜಮೀನು ಖರೀದಿಗೆ ವ್ಯಯಿಸಿರುತ್ತಾರೆ.
- ಅರ್ಕಾವತಿ ಬಡಾವಣೆ ನಿರ್ಮಿಸಲು ಭೂಸ್ವಾಧೀನಪಡಿಸಿಕೊಳ್ಳಲಾಗುವ ಪ್ರತಿ ಎಕರೆ ಜಮೀನಿನಲ್ಲಿ ನಿಯಮಾನುಸಾರ ಲಭ್ಯವಾಗುವ ವಸತಿ ನಿವೇಶನಗಳ ಪೈಕಿ ಭೂ ಮಾಲೀಕರಿಗೆ ಶೇಕಡ 40 ರಷ್ಟು ಅಂದರೆ ಪ್ರತಿ ಎಕರೆಗೆ 9583 ಚದರಡಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲು ದಿನಾಂಕ: 18-03-2011 ರಂದು ಸರ್ಕಾರದಿಂದ ಆದೇಶಿಸಲಾಗಿದೆ.
- ಸದರಿ ಆದೇಶದ ರೀತ್ಯಾ ಮೇಲ್ಕಂಡ 78 ಎಕರೆ ಜಮೀನಿಗೆ ಸಂಬಂಧಿಸಿದಂತೆ ಲಭ್ಯವಾಗುವ ಅಭಿವೃದ್ಧಿಪಡಿಸಿದ ಶೇಕಡ 40 ರಷ್ಟು ನಿವೇಶನಗಳು ಅಂದರೆ ಭೂಮಾಲೀಕರ ಭಾಗ ಸಂಘಕ್ಕೆ ವಾಸ್ತವವಾಗಿ ಬಿಡುಗಡೆಯಾಗಬೇಕಾಗಿರುತ್ತದೆ. ಆದರೆ ಸಂಘದ ಅಂದಿನ ನಿರ್ದೇಶಕರುಗಳು ಮೇಲ್ಕಂಡ ಯಾವುದೇ ಜಮೀನನ್ನು ಸಂಘಕ್ಕೆ ಈವರೆವಿಗೂ ಹಸ್ತಾಂತರಿಸದೆ ಅವರ ಹೆಸರಿನಲ್ಲಿಯೇ ದಾಖಲೆಗಳು ಮುಂದುವರಿದಿರುತ್ತವೆ.
- **9 ನೇ ಹಂತದ ಬಡಾವಣೆಗೆ 326 ಸದಸ್ಯರು ನಿವೇಶನ ಕೋರಿ ಮುಂಗಡ ಪಾವತಿಸಿರುತ್ತಾರೆ.**
- ಶ್ರೀ ಜೆ.ಮುನ್ನಾಗಪ್ಪ ಇವರ ಹೆಸರಿಗೆ 2012 ನೇ ಸಾಲಿನಲ್ಲಿ 80,000 ಚದರಡಿ ವಿಸ್ತೀರ್ಣದ 49 ನಿವೇಶನಗಳನ್ನು ಸಂಘದ ಪರವಾಗಿ ನೊಂದಾಯಿಸಲಾಗಿದ್ದು, ಈ ಪೈಕಿ 29 ನಿವೇಶನಗಳನ್ನು ಸಂಘದ ಸದಸ್ಯರಿಗೆ ನೋಂದಾಯಿಸಲಾಗಿದ್ದು, 20 ನಿವೇಶನಗಳ ದಾಖಲಾತಿಗಳು ಲೋಪದೋಷಗಳಿಂದ ಕೂಡಿರುತ್ತದೆ.
- 2016 ನೇ ಸಾಲಿನಲ್ಲಿ ಸಂಘಕ್ಕೆ ಜಮೀನು ನೀಡಿದ ರೈತರು ಇನ್ನು ಮುಂದೆ ಸಂಘಕ್ಕೆ ನಿವೇಶನಗಳನ್ನು ಬಿಡುಗಡೆ ಮಾಡದಿರಲು ತಕರಾರು ಸಲ್ಲಿಸಿದ್ದು, ಸಂಘವು ಸಹ ಭೂಸ್ವಾಧೀನಾಧಿಕಾರಿಗಳಿಗೆ ನಿವೇಶನಗಳನ್ನು ಸಂಘದ ಹೆಸರಿಗೆ ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ. ಈ ಮಧ್ಯೆ ಹಿಂದಿನ ಪದಾಧಿಕಾರಿಗಳಾದ ಸಂಘದ ಪರವಾಗಿ ಜಮೀನನ್ನು ನೊಂದಣಿ ಮಾಡಿಕೊಂಡ ಶ್ರೀ ದೊಡ್ಡಸ್ವಾಮಿಗೌಡ, ಶ್ರೀ ಹುಚ್ಚೇಗೌಡ, ಶ್ರೀ ಹೆಚ್.ಎಂ.ಕುಮಾರ್ ಮತ್ತು ಶ್ರೀ ಜೆ.ಮುನ್ನಾಗಪ್ಪ ಇವರುಗಳು ಸಹ ಭೂ ಪರಿಹಾರದ ಕ್ಲೈಂ ಕೋರಿರುತ್ತಾರೆ.
- ಈ ಬಗ್ಗೆ ವಿಚಾರಣೆ ನಡೆಸಿದ ವಿಶೇಷ ಭೂಸ್ವಾಧೀನಾಧಿಕಾರಿಗಳ ನ್ಯಾಯಾಲಯವು ರಾಜಿ ಸಂಧಾನದ ಜಂಟಿ ಮೆಮೊ ರೀತ್ಯಾ ಸಂಘಕ್ಕೆ ನಿಗದಿಯಾದ ಶೇಕಡ 40 ರಷ್ಟು ಅಭಿವೃದ್ಧಿಪಡಿಸಿದ ನಿವೇಶನಗಳ ಪೈಕಿ ಶೇಕಡ 20 ರಷ್ಟು ಹಿಂದಿನ ಭೂ ಮಾಲೀಕರ ಹೆಸರಿಗೆ ಮತ್ತು ಶೇಕಡ 20 ರಷ್ಟು ನಿವೇಶನಗಳನ್ನು ಸಂಘದ ಹೆಸರಿಗೆ ಹಂಚಿಕೆ ಮಾಡಿಕೊಡಲು ಆದೇಶಿಸಿರುತ್ತಾರೆ.
- ಮುಂದುವರಿದು ಸಂಘದ ಪರವಾಗಿ ಜಮೀನನ್ನು ನೋಂದಣಿ ಮಾಡಿಕೊಂಡಿದ್ದ ಅಂದಿನ ನಿರ್ದೇಶಕರುಗಳಾದ ಶ್ರೀ ದೊಡ್ಡಸ್ವಾಮಿಗೌಡ, ಶ್ರೀ ಹುಚ್ಚೇಗೌಡ, ಶ್ರೀ ಹೆಚ್.ಎಂ.ಕುಮಾರ್ ಮತ್ತು ಶ್ರೀ ಜೆ.ಮುನ್ನಾಗಪ್ಪ ಇವರುಗಳ ಭೂ ಪರಿಹಾರದ ಕ್ಲೈಂ ಅರ್ಜಿಯನ್ನು ವಜಾಗೊಳಿಸಿರುತ್ತದೆ.
- ಸಂಘದಿಂದ ಹಣ ನೀಡಿ ಶುದ್ಧ ಕ್ರಯ ಮೂಲಕ ರೈತರಿಂದ ಖರೀದಿಸಿರುವ ಸಂಘದ ಪೂರ್ಣ ಹಕ್ಕುಳ್ಳ ಶೇಕಡ 40 ರ ನಿವೇಶನಗಳನ್ನು ಸಂಘವು ಅವಲೋಕಿಸದೆ ಭೂ ಮಾಲೀಕರಿಗೆ ಶೇಕಡ 20 ರಷ್ಟು ನಿವೇಶನಗಳನ್ನು ಬಿಟ್ಟುಕೊಡಲು ಒಪ್ಪಿರುವುದು ಕಂಡುಬಂದಿರುತ್ತದೆ.

- ಮೇಲ್ಕಂಡ ಆದೇಶವನ್ನು ಪ್ರಶ್ನಿಸಿ ಸಂಘದ ಅಂದಿನ ನಿರ್ದೇಶಕರುಗಳು ಗೌರವ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆದಿರುತ್ತಾರೆ. ಪ್ರಕರಣ ನ್ಯಾಯಾಲಯದ ಹಂತದಲ್ಲಿರುತ್ತದೆ.
- ಗೌರವ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಸರ್ವೆ ನಂಬರ್‌ಗಳನ್ನು ಹೊರತುಪಡಿಸಿ ಬಾಕಿ ಜಮೀನುಗಳ ಭಾಗಕ್ಕೆ ಬರುವ ನಿವೇಶನಗಳನ್ನು ಬಿ.ಡಿ.ಎ ಯಿಂದ ಸಂಘದ ಹಿಂದಿನ ನಿರ್ದೇಶಕರಾದ ಶ್ರೀ ಹುಚ್ಚೇಗೌಡ, ಶ್ರೀ ಹೆಚ್.ಎಂ.ಕುಮಾರ್ ಮತ್ತು ಶ್ರೀ ಜೆ.ಮುನ್ನಾಗಪ್ಪ ಇವರುಗಳು ಒಟ್ಟು 60 ನಿವೇಶನಗಳನ್ನು ತಮ್ಮ ಸ್ವಂತ ಹೆಸರಿಗೆ ಬಿಡುಗಡೆ ಮಾಡಿಸಿಕೊಂಡು ಈ ಪೈಕಿ 19 ನಿವೇಶನಗಳನಗ್ನು ನಿಯಮಬಾಹಿರವಾಗಿ ಸಂಘದ ಸದಸ್ಯರಲ್ಲದ ಅನಧಿಕೃತ/ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವುದಾಗಿ ತಿಳಿದುಬಂದಿದೆ.
- ಇಲಾಖೆಯಿಂದ 2012 ನೇ ಸಾಲಿನಲ್ಲಿ ನಡೆಸಲಾದ ಕಲಂ 64 ರ ಶಾಸನಬದ್ಧ ವಿಚಾರಣಾ ವರದಿಯಲ್ಲಿ ಕಂಡುಬಂದ ನ್ಯೂನತೆ/ಅಧಿಕಾರ ದುರುಪಯೋಗದ ಬಗ್ಗೆ ಕಲಂ 69 ರಡಿ ಅಧಿಬಾರ ಪ್ರಕರಣದ ದಿನಾಂಕ:10-12-2015 ರ ಆದೇಶದಲ್ಲಿ ಸಂಘಕ್ಕೆ ಬರಬೇಕಾದ ಜಮೀನು ಮಾಲಿಕತ್ವದ ಸಂಬಂಧ ಸಂಘದ ಪರವಾಗಿ ತಮ್ಮ ಹೆಸರಿನಲ್ಲಿ ಖರೀದಿಸಲಾಗಿರುವ ಜಮೀನುಗಳನ್ನು ಸಂಘಕ್ಕೆ ವರ್ಗಾಯಿಸಲು ಪ್ರತಿವಾದಿಗಳಾದ ಸಂಘದ ಅಂದಿನ ನಿರ್ದೇಶಕರುಗಳಿಗೆ ಆದೇಶಿಸಲಾಗಿದೆ.
- ಈ ಕುರಿತು ಸಂಘವು ಜಮೀನುಗಳನ್ನು ವಶಕ್ಕೆ ಪಡೆಯಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
- 9 ನೇ ಹಂತದ ಬಡಾವಣೆಗೆ 326 ಸದಸ್ಯರು ನಿವೇಶನ ಠೇವಣಿ ಪಾವತಿಸಿದ್ದು, ಇದರಲ್ಲಿ 29 ಸದಸ್ಯರಿಗೆ ನಿವೇಶನಗಳನ್ನು ನೋಂದಣಿ ಮಾಡಲಾಗಿದ್ದು, 297 ಸದಸ್ಯರಿಗೆ ನಿವೇಶನ ಹಂಚಿಕೆಗೆ ಬಾಕಿ ಇರುತ್ತದೆ.
- **ಸಂಘದ ಅಂದಿನ ನಿರ್ದೇಶಕರುಗಳು, ಸಂಘದ ಸದಸ್ಯರಿಂದ ಸಂಗ್ರಹಿಸಿದ ನಿವೇಶನದ ಮುಂಗಡದ ಹಣದಿಂದ, ಖರೀದಿಸಿದ ಜಮೀನನ್ನು ಸಂಘದ ವಶಕ್ಕೆ ನೀಡದೆ ದುರುಪಯೋಗಪಡಿಸಿಕೊಂಡಿರುವುದು, ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಮುಂದುವರಿದು ಈ ದಿಸೆಯಲ್ಲಿ ಪ್ರಸ್ತುತ ಸಂಘದ ಆಡಳಿತ ಮಂಡಳಿಯು ಸಹ ಕಾನೂನು ಕ್ರಮ ಜರುಗಿಸಲು ಲೋಪವೆಸಗಿ ನಿರ್ಲಕ್ಷ್ಯತನ ಮತ್ತು ಉದಾಸೀನತೆಯನ್ನು ತೋರಿರುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಬಡಾವಣೆಗೆ ಸಂಬಂಧಿಸಿದ ಸಮಗ್ರ ವ್ಯವಹಾರಗಳ ಕುರಿತು ಪ್ರತ್ಯೇಕವಾಗಿ ಶಾಸನಬದ್ಧ ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮವಿಡಲಾಗುವುದು.**

**ಸಿಒ 43 ಸಿಹೆಚ್‌ಎಸ್ 2021 (ಇ)**

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

107

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾರಾಯಣಸ್ವಾಮಿ ಇವರ ನಿಯಮ 72 ರಡಿ ಗಮನ ಸೆಳೆಯುವ ಸೂಚನೆಗೆ ಉತ್ತರ

**ವಿಷಯ:-**

ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಸಂಸ್ಥೆಯ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ, ಇವರು ಕಳೆದ 50 ವರ್ಷಗಳಲ್ಲಿ ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಸುಮಾರು 12 ಸಾವಿರ ಬಿ.ಇ.ಎಂ.ಎಲ್ ಕಾರ್ಮಿಕರಿಗೆ ನಿವೇಶನವನ್ನು ಹಂಚಿಕೆ ಮಾಡಿದೆ. ಆದರೆ 2002-2003 ನೇ ಸಾಲಿನಲ್ಲಿ ಸಂಘದ ಸದಸ್ಯರಿಗೆ ನಿವೇಶನವನ್ನು ಹಂಚಿಕೆ ಮಾಡಲು ಉದ್ದೇಶಿಸಿ ಕೆ.ಆರ್.ಪುರಂನ ಥಣಿಸಂದ್ರ, ಗೆದ್ಲಹಳ್ಳಿ ಹಾಗೂ ಬೈರತಿ ಅಮಾನಿ ಖಾನೆ ಪ್ರದೇಶಗಳಲ್ಲಿ ಒಟ್ಟು 78 ಎಕರೆ ಪ್ರದೇಶವನ್ನು ರೈತರಿಂದ ನೇರವಾಗಿ ಖರೀದಿ ಮಾಡಿ ಅಂದಿನ ಸಂಘದ ನಿರ್ದೇಶಕರ/ಪದಾಧಿಕಾರಿಗಳ ಹೆಸರಿಗೆ ನೊಂದಣಿಯನ್ನು ಮಾಡಿಸಲಾಗಿದ್ದ ಈ ಜಮೀನನ್ನು ಸಂಘದ ಪದಾಧಿಕಾರಿಗಳು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ಶಾಮೀಲಾಗಿ ನೈಜ ಸಂಘದ ಸದಸ್ಯರಿಗೆ ನಿವೇಶನವನ್ನು ನೀಡದೆ ಖಾಸಗಿ ವ್ಯಕ್ತಿಗಳಿಗೆ ಮಾರಾಟವನ್ನು ಮಾಡಿ, ಸುಮಾರು 45 ರಿಂದ 50 ಕೋಟಿ ರೂಗಳಷ್ಟು ಹಣವನ್ನು ಸಂಘದ ಮಾಜಿ ಪದಾಧಿಕಾರಿಗಳು ಗುಳುಂ ಮಾಡಿದ್ದಾರೆ. ಸುಮಾರು 20 ವರ್ಷಗಳಿಂದ ನಿವೇಶನಕ್ಕಾಗಿ ಕಾಯುತ್ತಿದ್ದ ಸಂಘದ ನೈಜ ಸದಸ್ಯರಿಗೆ ವಂಚನೆಯನ್ನು ಮಾಡಿರುವ ಈ ವಿಷಯವು ಸಾರ್ವಜನಿಕವಾಗಿ ಮಹತ್ವವಾಗಿರುವುದರಿಂದ ಸದನದಲ್ಲಿ ಪ್ರಸ್ತಾಪಿಸಲು ಮಾನ್ಯ ಸಹಕಾರ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:-**

- ದಿನಾಂಕ:31-03-2021 ರ ಅಂತ್ಯಕ್ಕೆ ಸಂಘದಲ್ಲಿ 3726 ಸದಸ್ಯರು, 2729 ಸಹಸದಸ್ಯರಿರುತ್ತಾರೆ. ಸಂಘವು ಇದುವರೆಗೆ 11 ಬಡಾವಣೆಗಳನ್ನು ನಿರ್ಮಿಸಿ ತನ್ನ ಸದಸ್ಯರಿಗೆ 7356 ನಿವೇಶನಗಳನ್ನು ನೋಂದಣಿ ಮಾಡಿರುತ್ತದೆ.
- ಕೆ.ಆರ್.ಪುರಂ ಹೋಬಳಿಯ ಥಣಿಸಂದ್ರ, ಗೆದ್ಲಹಳ್ಳಿ ಭೈರತಿ ಅಮಾನಿಖಾನೆ ಗ್ರಾಮಗಳಲ್ಲಿ 94 ಎಕರೆ ಜಮೀನನ್ನು ಸದಸ್ಯರಿಗೆ ನಿವೇಶನವನ್ನು ಅಭಿವೃದ್ಧಿಪಡಿಸುವ ಸಲುವಾಗಿ 2002 ನೇ ಸಾಲಿನಲ್ಲಿ ನಿರ್ದೇಶಕರ ಹೆಸರಿನಲ್ಲಿ ನೋಂದಣಿರಹಿತ ಕರಾರು ಮಾಡಿಕೊಂಡಿರುತ್ತಾರೆ.
- ಸದರಿ ಜಮೀನನ್ನು ಒಳಗೊಂಡಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿ:03-02-2003 ರಲ್ಲಿ 4(1) ನೋಟಿಫಿಕೇಶನ್ ಮಾಡಿ ದಿ:23-02-2004 ರಲ್ಲಿ 6(1) ರೀತ್ಯಾ ಸ್ವಾಧೀನಪಡಿಸಿಕೊಂಡಿರುತ್ತಾರೆ.
- ಒಟ್ಟು 78 ಎಕರೆ ಜಮೀನು 2003-04 ನೇ ಸಾಲಿನಲ್ಲಿ ಸಂಘದ ಅಂದಿನ ಆಡಳಿತ ಮಂಡಳಿ ನಿರ್ದೇಶಕರುಗಳಾದ ಶ್ರೀ ದೊಡ್ಡಸ್ವಾಮಿಗೌಡ ಇವರ ಹೆಸರಿನಲ್ಲಿ 4 ಎಕರೆ 10 ಗುಂಟೆ, ಶ್ರೀ ಎಂ.ಹುಚ್ಚೇಗೌಡ ಇವರ ಹೆಸರಿನಲ್ಲಿ 5 ಎಕರೆ, ಶ್ರೀ ಹೆಚ್.ಎಂ.ಕುಮಾರ್ ಇವರ ಹೆಸರಿನಲ್ಲಿ 27 ಎಕರೆ, ಶ್ರೀ ಜೆ.ಮುನ್ನಾಗಪ್ಪ ಇವರ ಹೆಸರಿನಲ್ಲಿ 41 ಎಕರೆ ನೋಂದಣಿಯಾಗಿರುತ್ತವೆ.
- ಸದರಿ ಜಮೀನುಗಳ ಖರೀದಿಗಾಗಿ ಸಂಘದ ಸದಸ್ಯರಿಂದ ಸಂಗ್ರಹಿಸಿದ ಸುಮಾರು 22 ಕೋಟಿ ನಿವೇಶನ ಮುಂಗಡದ ಹಣ ನೀಡಿದೆ.

..2

- 4(1) ನೋಟಿಪಿಕೇಶನ್ ಆಗಿದ್ದಾಗ್ಯೂ ಸಹ ಸಂಘದ ಸದಸ್ಯರಿಂದ ಸಂಗ್ರಹಿಸಲಾಗಿದ್ದ ನಿವೇಶನ ಠೇವಣಿಯನ್ನು ಸದರಿ ಜಮೀನು ಖರೀದಿಗೆ ವ್ಯಯಿಸಿರುತ್ತಾರೆ.
- ಅರ್ಕಾವತಿ ಬಡಾವಣೆ ನಿರ್ಮಿಸಲು ಭೂಸ್ವಾಧೀನಪಡಿಸಿಕೊಳ್ಳಲಾಗುವ ಪ್ರತಿ ಎಕರೆ ಜಮೀನಿನಲ್ಲಿ ನಿಯಮಾನುಸಾರ ಲಭ್ಯವಾಗುವ ವಸತಿ ನಿವೇಶನಗಳ ಪೈಕಿ ಭೂ ಮಾಲೀಕರಿಗೆ ಶೇಕಡ 40 ರಷ್ಟು ಅಂದರೆ ಪ್ರತಿ ಎಕರೆಗೆ 9583 ಚದರಡಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲು ದಿನಾಂಕ: 18-03-2011 ರಂದು ಸರ್ಕಾರದಿಂದ ಆದೇಶಿಸಲಾಗಿದೆ.
- ಸದರಿ ಆದೇಶದ ರೀತ್ಯಾ ಮೇಲ್ಕಂಡ 78 ಎಕರೆ ಜಮೀನಿಗೆ ಸಂಬಂಧಿಸಿದಂತೆ ಲಭ್ಯವಾಗುವ ಅಭಿವೃದ್ಧಿಪಡಿಸಿದ ಶೇಕಡ 40 ರಷ್ಟು ನಿವೇಶನಗಳು ಅಂದರೆ ಭೂಮಾಲೀಕರ ಭಾಗ ಸಂಘಕ್ಕೆ ವಾಸ್ತವವಾಗಿ ಬಿಡುಗಡೆಯಾಗಬೇಕಾಗಿರುತ್ತದೆ. ಆದರೆ ಸಂಘದ ಅಂದಿನ ನಿರ್ದೇಶಕರುಗಳು ಮೇಲ್ಕಂಡ ಯಾವುದೇ ಜಮೀನನ್ನು ಸಂಘಕ್ಕೆ ಈವರೆವಿಗೂ ಹಸ್ತಾಂತರಿಸದೆ ಅವರ ಹೆಸರಿನಲ್ಲಿಯೇ ದಾಖಲೆಗಳು ಮುಂದುವರಿದಿರುತ್ತವೆ.
- **9 ನೇ ಹಂತದ ಬಡಾವಣೆಗೆ 326 ಸದಸ್ಯರು ನಿವೇಶನ ಕೋರಿ ಮುಂಗಡ ಪಾವತಿಸಿರುತ್ತಾರೆ.**
- ಶ್ರೀ ಜೆ.ಮುನ್ನಾಗಪ್ಪ ಇವರ ಹೆಸರಿಗೆ 2012 ನೇ ಸಾಲಿನಲ್ಲಿ 80,000 ಚದರಡಿ ವಿಸ್ತೀರ್ಣದ 49 ನಿವೇಶನಗಳನ್ನು ಸಂಘದ ಪರವಾಗಿ ನೊಂದಾಯಿಸಲಾಗಿದ್ದು, ಈ ಪೈಕಿ 29 ನಿವೇಶನಗಳನ್ನು ಸಂಘದ ಸದಸ್ಯರಿಗೆ ನೋಂದಾಯಿಸಲಾಗಿದ್ದು, 20 ನಿವೇಶನಗಳ ದಾಖಲಾತಿಗಳು ಲೋಪದೋಷಗಳಿಂದ ಕೂಡಿರುತ್ತದೆ.
- 2016 ನೇ ಸಾಲಿನಲ್ಲಿ ಸಂಘಕ್ಕೆ ಜಮೀನು ನೀಡಿದ ರೈತರು ಇನ್ನು ಮುಂದೆ ಸಂಘಕ್ಕೆ ನಿವೇಶನಗಳನ್ನು ಬಿಡುಗಡೆ ಮಾಡದಿರಲು ತಕರಾರು ಸಲ್ಲಿಸಿದ್ದು, ಸಂಘವು ಸಹ ಭೂಸ್ವಾಧೀನಾಧಿಕಾರಿಗಳಿಗೆ ನಿವೇಶನಗಳನ್ನು ಸಂಘದ ಹೆಸರಿಗೆ ಬಿಡುಗಡೆ ಮಾಡಲು ಮನವಿ ಸಲ್ಲಿಸಿರುತ್ತಾರೆ. ಈ ಮದ್ಯೆ ಹಿಂದಿನ ಪದಾಧಿಕಾರಿಗಳಾದ ಸಂಘದ ಪರವಾಗಿ ಜಮೀನನ್ನು ನೊಂದಣಿ ಮಾಡಿಕೊಂಡ ಶ್ರೀ ದೊಡ್ಡಸ್ವಾಮಿಗೌಡ, ಶ್ರೀ ಹುಚ್ಚೇಗೌಡ, ಶ್ರೀ ಹೆಚ್.ಎಂ.ಕುಮಾರ್ ಮತ್ತು ಶ್ರೀ ಜೆ.ಮುನ್ನಾಗಪ್ಪ ಇವರುಗಳು ಸಹ ಭೂ ಪರಿಹಾರದ ಕ್ಲೈಂ ಕೋರಿರುತ್ತಾರೆ.
- ಈ ಬಗ್ಗೆ ವಿಚಾರಣೆ ನಡೆಸಿದ ವಿಶೇಷ ಭೂಸ್ವಾಧೀನಾಧಿಕಾರಿಗಳ ನ್ಯಾಯಾಲಯವು ರಾಜಿ ಸಂಧಾನದ ಜಂಟಿ ಮೆಮೊ ರೀತ್ಯಾ ಸಂಘಕ್ಕೆ ನಿಗದಿಯಾದ ಶೇಕಡ 40 ರಷ್ಟು ಅಭಿವೃದ್ಧಿಪಡಿಸಿದ ನಿವೇಶನಗಳ ಪೈಕಿ ಶೇಕಡ 20 ರಷ್ಟು ಹಿಂದಿನ ಭೂ ಮಾಲೀಕರ ಹೆಸರಿಗೆ ಮತ್ತು ಶೇಕಡ 20 ರಷ್ಟು ನಿವೇಶನಗಳನ್ನು ಸಂಘದ ಹೆಸರಿಗೆ ಹಂಚಿಕೆ ಮಾಡಿಕೊಡಲು ಆದೇಶಿಸಿರುತ್ತಾರೆ.
- ಮುಂದುವರಿದು ಸಂಘದ ಪರವಾಗಿ ಜಮೀನನ್ನು ನೋಂದಣಿ ಮಾಡಿಕೊಂಡಿದ್ದ ಅಂದಿನ ನಿರ್ದೇಶಕರುಗಳಾದ ಶ್ರೀ ದೊಡ್ಡಸ್ವಾಮಿಗೌಡ, ಶ್ರೀ ಹುಚ್ಚೇಗೌಡ, ಶ್ರೀ ಹೆಚ್.ಎಂ.ಕುಮಾರ್ ಮತ್ತು ಶ್ರೀ ಜೆ.ಮುನ್ನಾಗಪ್ಪ ಇವರುಗಳ ಭೂ ಪರಿಹಾರದ ಕ್ಲೈಂ ಅರ್ಜಿಯನ್ನು ವಜಾಗೊಳಿಸಿರುತ್ತದೆ.
- ಸಂಘದಿಂದ ಹಣ ನೀಡಿ ಶುದ್ಧ ಕ್ರಯ ಮೂಲಕ ರೈತರಿಂದ ಖರೀದಿಸಿರುವ ಸಂಘದ ಪೂರ್ಣ ಹಕ್ಕುಳ್ಳ ಶೇಕಡ 40 ರ ನಿವೇಶನಗಳನ್ನು ಸಂಘವು ಅವಲೋಕಿಸದೆ ಭೂ ಮಾಲೀಕರಿಗೆ ಶೇಕಡ 20 ರಷ್ಟು ನಿವೇಶನಗಳನ್ನು ಬಿಟ್ಟುಕೊಡಲು ಒಪ್ಪಿರುವುದು ಕಂಡುಬಂದಿರುತ್ತದೆ.

- ಮೇಲ್ಕಂಡ ಆದೇಶವನ್ನು ಪ್ರಶ್ನಿಸಿ ಸಂಘದ ಅಂದಿನ ನಿರ್ದೇಶಕರುಗಳು ಗೌರವ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ತಡೆಯಾಜ್ಞೆ ಪಡೆದಿರುತ್ತಾರೆ. ಪ್ರಕರಣ ನ್ಯಾಯಾಲಯದ ಹಂತದಲ್ಲಿರುತ್ತದೆ.
- ಗೌರವ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಸರ್ವೆ ನಂಬರ್‌ಗಳನ್ನು ಹೊರತುಪಡಿಸಿ ಬಾಕಿ ಜಮೀನುಗಳ ಭಾಗಕ್ಕೆ ಬರುವ ನಿವೇಶನಗಳನ್ನು ಬಿ.ಡಿ.ಎ ಯಿಂದ ಸಂಘದ ಹಿಂದಿನ ನಿರ್ದೇಶಕರಾದ ಶ್ರೀ ಹುಚ್ಚೇಗೌಡ, ಶ್ರೀ ಹೆಚ್.ಎಂ.ಕುಮಾರ್ ಮತ್ತು ಶ್ರೀ ಜೆ.ಮುನ್ನಾಗಪ್ಪ ಇವರುಗಳು ಒಟ್ಟು 60 ನಿವೇಶನಗಳನ್ನು ತಮ್ಮ ಸ್ವಂತ ಹೆಸರಿಗೆ ಬಿಡುಗಡೆ ಮಾಡಿಸಿಕೊಂಡು ಈ ಪೈಕಿ 19 ನಿವೇಶನಗಳನಗ್ನು ನಿಯಮಬಾಹಿರವಾಗಿ ಸಂಘದ ಸದಸ್ಯರಲ್ಲದ ಅನಧಿಕೃತ/ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿರುವುದಾಗಿ ತಿಳಿದುಬಂದಿದೆ.
- ಇಲಾಖೆಯಿಂದ 2012 ನೇ ಸಾಲಿನಲ್ಲಿ ನಡೆಸಲಾದ ಕಲಂ 64 ರ ಶಾಸನಬದ್ಧ ವಿಚಾರಣಾ ವರದಿಯಲ್ಲಿ ಕಂಡುಬಂದ ನ್ಯೂನತೆ/ಅಧಿಕಾರ ದುರುಪಯೋಗದ ಬಗ್ಗೆ ಕಲಂ 69 ರಡಿ ಅಧಿಬಾರ ಪ್ರಕರಣದ ದಿನಾಂಕ:10-12-2015 ರ ಆದೇಶದಲ್ಲಿ ಸಂಘಕ್ಕೆ ಬರಬೇಕಾದ ಜಮೀನು ಮಾಲಿಕತ್ವದ ಸಂಬಂಧ ಸಂಘದ ಪರವಾಗಿ ತಮ್ಮ ಹೆಸರಿನಲ್ಲಿ ಖರೀದಿಸಲಾಗಿರುವ ಜಮೀನುಗಳನ್ನು ಸಂಘಕ್ಕೆ ವರ್ಗಾಯಿಸಲು ಪ್ರತಿವಾದಿಗಳಾದ ಸಂಘದ ಅಂದಿನ ನಿರ್ದೇಶಕರುಗಳಿಗೆ ಆದೇಶಿಸಲಾಗಿದೆ.
- ಈ ಕುರಿತು ಸಂಘವು ಜಮೀನುಗಳನ್ನು ವಶಕ್ಕೆ ಪಡೆಯಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.
- 9 ನೇ ಹಂತದ ಬಡಾವಣೆಗೆ 326 ಸದಸ್ಯರು ನಿವೇಶನ ಠೇವಣಿ ಪಾವತಿಸಿದ್ದು, ಇದರಲ್ಲಿ 29 ಸದಸ್ಯರಿಗೆ ನಿವೇಶನಗಳನ್ನು ನೋಂದಣಿ ಮಾಡಲಾಗಿದ್ದು, 297 ಸದಸ್ಯರಿಗೆ ನಿವೇಶನ ಹಂಚಿಕೆಗೆ ಬಾಕಿ ಇರುತ್ತದೆ.
- **ಸಂಘದ ಅಂದಿನ ನಿರ್ದೇಶಕರುಗಳು, ಸಂಘದ ಸದಸ್ಯರಿಂದ ಸಂಗ್ರಹಿಸಿದ ನಿವೇಶನದ ಮುಂಗಡದ ಹಣದಿಂದ, ಖರೀದಿಸಿದ ಜಮೀನನ್ನು ಸಂಘದ ವಶಕ್ಕೆ ನೀಡದೆ ದುರುಪಯೋಗಪಡಿಸಿಕೊಂಡಿರುವುದು, ಅವ್ಯವಹಾರ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಮುಂದುವರಿದು ಈ ದಿಸೆಯಲ್ಲಿ ಪ್ರಸ್ತುತ ಸಂಘದ ಆಡಳಿತ ಮಂಡಳಿಯು ಸಹ ಕಾನೂನು ಕ್ರಮ ಜರುಗಿಸಲು ಲೋಪವೆಸಗಿ ನಿರ್ಲಕ್ಷ್ಯತನ ಮತ್ತು ಉದಾಸೀನತೆಯನ್ನು ತೋರಿರುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಬಡಾವಣೆಗೆ ಸಂಬಂಧಿಸಿದ ಸಮಗ್ರ ವ್ಯವಹಾರಗಳ ಕುರಿತು ಪ್ರತ್ಯೇಕವಾಗಿ ಶಾಸನಬದ್ಧ ವಿಚಾರಣೆ ನಡೆಸಿ ಮುಂದಿನ ಕಾನೂನು ಕ್ರಮವಿಡಲಾಗುವುದು.**

**ಸಿಒ 43 ಸಿಹೆಚ್‌ಎಸ್ 2021 (ಇ)**

ಎಸ್. ಟಿ. ಸೋಮಶೇಖರ್

**(ಎಸ್.ಟಿ.ಸೋಮಶೇಖರ್)**

**ಸಹಕಾರ ಸಚಿವರು**